LIBRARY

13523

Reg. No.

# V Semester B.Com./B.Com.(Tourism)/B.Com.(LSCM) Degree Examination, March/April - 2022

## Income Tax - I

## (CBCS Scheme 2018 Repeater)

## Paper : 5.3

**Time : 3 Hours** **Maximum Marks : 70**

***Instructions to Candidates:***

Answer should be written completely either Kannada or in English.

BMSCW LIBRARY

## SECTION - A

## ವಿಭಾಗ - ಎ

Answer any five sub-questions. Each sub-question carries two marks. **(5×2=10)**

ಯಾವುದಾದರೂ ಐದು ಉಪ ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಗೆ ಎರಡು ಅಂಕಗಳು.

1. a) What do you mean by previous year ?

   ಹಿಂದಿನ ವರ್ಷ ಎಂದರೇನು ?

   b) What is total income ?

   ನಿವ್ವಳ ಆದಾಯ ಎಂದರೇನು ?

   c) Expand CBDT and PAN.

   CBDT ಹಾಗೂ PAN ನ್ನು ವಿಸ್ತರಿಸಿ.

   d) Give two examples for Tax free perquisities.

   ಎರಡು ತೆರಿಗೆ ಮುಕ್ತ ಸವಲತ್ತುಗಳಿಗೆ ಉದಾಹರಣೆ ಕೊಡಿ.

   e) Define Annual Value.

   'ವಾರ್ಷಿಕ ಮೌಲ್ಯ' ವ್ಯಾಖ್ಯಾನಿಸಿ.

   f) What is un-realised rent ?

   ವಸೂಲಾಗದ ಬಾಡಿಗೆ ಎಂದರೇನು ?

   g) Mention any two income tax authorities.

   ಯಾವುದಾದರೂ ಎರಡು ಆದಾಯ ತೆರಿಗೆ ಅಧಿಕಾರಿಗಳನ್ನು ತಿಳಿಸಿ.

[P.T.O.

LIBRARY



## SECTION - B

## ವಿಭಾಗ - ಬಿ

Answer any 3 of the following questions. Each question carries 6 marks. (3×6=18)

ಕೆಳಗಿನ ಯಾವುದಾದರೂ 3 ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 6 ಅಂಕಗಳು.

2. Mr. Satish an employee of PQR Co. Ltd. Mysore, has left India for the first time on 16th July 2020 for higher training in U.K. Calculate his residential status for the assessment year 2021-22.

   PQR ಕಂಪನಿ ನಿಯಮಿತ ಮೈಸೂರಿನ ನೌಕರರಾದ ಶ್ರೀ ಸತೀಶ್ ರವರು ಮೊದಲನೆ ಬಾರಿಗೆ ದಿನಾಂಕ 16/7/2020 ರಂದು ಭಾರತ ದೇಶವನ್ನು ಬಿಟ್ಟು U.K. ದೇಶಕ್ಕೆ ಹೆಚ್ಚಿನ ತರಬೇತಿಗೆ ಹೋದರು. ಇವರ ನಿವಾಸಿ ಸ್ಥಿತಿಯನ್ನು ತೆರಿಗೆ ವರ್ಷ 2021-22 ನಿರ್ಧರಿಸಿ.

3. Briefly explain any three cannons of taxation.

   ಯಾವುದಾದರೂ ಮೂರು ತೆರಿಗೆ ಸಿದ್ಧಾಂತಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

4. Compute the Net Annual from the following information.

   a) Municipal Rental value Rs.1,00,000
   b) Fair Rental value Rs.90,000
   c) Actual Rent Rs.10,000 per month
   d) Unrealised Rent Rs.10,000
   e) Municipal taxes paid Rs.10,000
   f) Standard Rent Rs.1,10,000

   ಈ ಕೆಳಗಿನ ವಿವರಗಳಿಂದ ಮನೆ ಆಸ್ತಿಯ ನಿವ್ವಳ ವಾರ್ಷಿಕ ಮೌಲ್ಯವನ್ನು ಕಂಡುಹಿಡಿಯಿರಿ.

   a) ಪೌರಾಡಳಿತ ಬಾಡಿಗೆ ಮೌಲ್ಯ ರೂ.1,00,000
   b) ನಿಖರ ಬಾಡಿಗೆ ಮೌಲ್ಯ ರೂ.90,000
   c) ನೈಜ ಬಾಡಿಗೆ ತಿಂಗಳಿಗೆ ರೂ.10,000
   d) ವಸೂಲಾಗದ ಬಾಡಿಗೆ ರೂ.10,000
   e) ಪಾವತಿಸಿದ ಪುರಸಭಾ ತೆರಿಗೆಗಳು ರೂ.10,000
   f) ಶಿಷ್ಟ ಬಾಡಿಗೆ ರೂ.1,10,000

BMSCW LIBRARY

5. Mr. Arun getting a pension of Rs.8000 p.m. from a company. During the previous year 2020-21 he got his 2/3 pension commuted & received Rs.5,08,000. Calculate the total taxable pension, if he also receives gratuity.

   ಶ್ರೀ ಅರುಣ್ ರವರು ತಿಂಗಳಿಗೆ ರೂ.8000 ಗಳನ್ನು ಕಂಪನಿಯಿಂದ ಪಿಂಚಣಿಯಾಗಿ ಪಡೆಯುತ್ತಿದ್ದಾರೆ. ಅವರು 2020-21 ನೇ ವರ್ಷದಲ್ಲಿ ತಮ್ಮ 2/3 ರಷ್ಟು ವೇತನವನ್ನು ಪರಿವರ್ತಿಸಿ ರೂ.5,08,000 ಗಳನ್ನು ಪಡೆದಿರುತ್ತಾರೆ. ಇವರು ಗ್ರಾಚ್ಯುಟಿಯನ್ನು ಕೂಡ ಪಡೆದಿದ್ದು ಇವರ ಒಟ್ಟು ತೆರಿಗೆಗೆ ಒಳಪಡುವ ಪಿಂಚಣಿಯ ಆದಾಯವನ್ನು ಕಂಡುಹಿಡಿಯಿರಿ.

LIBRARY



6. Mr. Veeresh retired on 31-03-2021 after serving in a company for 32 years & 10 months. He received Rs.1,78,000 as gratuity. His average monthly salary in the immediately preceeding 10 months was Rs.28,000.

Compute his taxable gratuity for the A.Y. 2021-22 (Employee is not covered under Gratuity Act).

ಶ್ರೀ ವಿರೇಶ್‌ನು ಒಂದು ಕಂಪನಿಯಲ್ಲಿ 32 ವರ್ಷ ಮತ್ತು 10 ತಿಂಗಳು ಸೇವೆ ಮಾಡಿ 31-03-2021 ರಂದು ನಿವೃತ್ತಿ ಹೊಂದಿರುತ್ತಾನೆ. ಆತನು ರೂ.1,78,000 ಗಳನ್ನು ಗ್ರಾಚ್ಯುಟಿಯಾಗಿ ಪಡೆದಿರುತ್ತಾನೆ. ಆತನ ನಿವೃತ್ತಿಯ ಹಿಂದಿನ ತಿಂಗಳಿನ ಸರಾಸರಿ ಹತ್ತು ತಿಂಗಳ ಸಂಬಳ ರೂ.28,000. ಆತನ ಕರರಹಿತ ಗ್ರಾಚ್ಯುಟಿ ಹಾಗೂ ಕರಕ್ಕೆ ಒಳಪಡುವ ಗ್ರಾಚ್ಯುಟಿಯನ್ನು ಕಂಡುಹಿಡಿಯಿರಿ. ತೆರಿಗೆ ವರ್ಷ 2021-22 (ನೌಕರನು ಗ್ರಾಚ್ಯುಟಿ ನೀಡುವುದು ಕಾಯ್ದೆಗೆ ಒಳಪಟ್ಟಿಲ್ಲ).

## SECTION - C
## ವಿಭಾಗ – ಸಿ

Answer any THREE questions. Each question carries fourteen marks. **(3×14=42)**

ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಹದಿನಾಲ್ಕು ಅಂಕಗಳು.

BMSCW LIBRARY

7. Mr. Avinash furnishes the following information of income for the A.Y. 2021-22. Find out his total income if his Residential status is :

a) Ordinary Resident

b) Not-Ordinary Resident

c) Non-Resident Indian

i) Income from business from Mumbai - Rs.1,00,000

ii) Profit from business in USA controlled from India - Rs.50,000

iii) Income from house property in Japan received there - Rs.50,000

iv) Income from Business in India, but received in London - Rs.30,000

v) Salary received in India for service rendered in USA - Rs.70,000

vi) Profit from business in Malaysia controlled from India (1/3 received in India) - Rs.30,000

vii) Past untaxed income brought into India - Rs.8,000

viii) Dividend received from domestic company - Rs.5000

ix) Agricultural income earned in Nepal - Rs.25,000

x) Interest earned on POSB A/c - Rs.3,000

xi) Interest received on private company securities - Rs.25,000

xii) Gift in cash from father - Rs.30,000

LIBRARY



ಶ್ರೀಯುತ ಅವಿನಾಶ ರವರು ಈ ಕೆಳಕಂಡಂತೆ 2021-22 ನೇ ವರ್ಷಕ್ಕೆ ತಮ್ಮ ಆದಾಯವನ್ನು ನೀಡಿದ್ದಾರೆ. ಈ ಕರ ವರ್ಷಕ್ಕೆ ಕೆಳಗಿನ ಸಂದರ್ಭಗಳಿಗೆ ಅವರ ಒಟ್ಟು ಆದಾಯವನ್ನು ಕಂಡುಹಿಡಿಯಿರಿ.

a) ಅವರು ಸಾಧಾರಣ ನಿವಾಸಿಯಾಗಿದ್ದರೆ

b) ಅವರು ಅಸಾಧಾರಣ ನಿವಾಸಿಯಾಗಿದ್ದರೆ

c) ಅವರು ಅನಿವಾಸಿ ಭಾರತೀಯರಾಗಿದ್ದರೆ

i) ಮುಂಬೈನಲ್ಲಿನ ವ್ಯಾಪಾರದಿಂದ ಬಂದ ಆದಾಯ ರೂ.1,00,000

ii) USA ವ್ಯಾಪಾರದಿಂದ ಬಂದ ಲಾಭ ರೂ.50,000 ಗಳು. ಆದರೆ ವ್ಯಾಪಾರವು ಭಾರತದಿಂದ ನಿಯಂತ್ರಿಸಲ್ಪಡುತ್ತದೆ.

iii) ಜಪಾನಿನಲ್ಲಿರುವ ಮನೆ ಸ್ವತ್ತಿಯಿಂದ ಬಂದ ಆದಾಯ ರೂ.50,000 ಗಳು ಜಪಾನಿನಲ್ಲಿಯೇ ಸ್ವೀಕರಿಸಲಾಗಿದೆ.

BMSCW LIBRARY

iv) ಭಾರತದಲ್ಲಿನ ವ್ಯಾಪಾರದಿಂದ ಬಂದ ಆದಾಯ, ಲಂಡನ್‌ನಲ್ಲಿ ಸ್ವೀಕರಿಸಲಾಗಿದೆ. ರೂ.30,000

v) USA ನಲ್ಲಿ ಸಲ್ಲಿಸಿದ ಸೇವೆಗಾಗಿ ಭಾರತದಲ್ಲಿ ಸ್ವೀಕರಿಸಿದ ಸಂಬಳ ರೂ.70,000

vi) ಭಾರತದಿಂದ ನಿಯಂತ್ರಿಸಲ್ಪಡುವ ಮಲೇಷಿಯಾದಿಂದ ಬಂದ ವ್ಯಾಪಾರದ ಲಾಭ ರೂ.30,000 (1/3 ರಷ್ಟು ಭಾರತದಲ್ಲಿ ಸ್ವೀಕರಿಸಲಾಗಿದೆ.)

vii) ತೆರಿಗೆ ಒಳಪಡದ ಹಳೆಯ ವಿದೇಶಿ ಆದಾಯವನ್ನು ಭಾರತಕ್ಕೆ ತಂದಿದ್ದು ರೂ.8,000

viii) ದೇಶೀ ಕಂಪನಿಯಿಂದ ಸ್ವೀಕರಿಸಿದ ಲಾಭಾಂಶ ರೂ.5000

ix) ನೇಪಾಳದಲ್ಲಿ ಗಳಿಸಿದ ಕೃಷಿ ಆದಾಯ ರೂ.25,000

x) ಅಂಚೆ ಕಛೇರಿಯ S.B. ಖಾತೆಯಿಂದ ಗಳಿಸಿದ ಬಡ್ಡಿ ರೂ.3,000

xi) ಖಾಸಗಿ ಕಂಪನಿಯ ಸೆಕ್ಯೂರಿಟೀಸ್‌ನಿಂದ ಗಳಿಸಿದ ಬಡ್ಡಿ ರೂ.25,000

xii) ತಂದೆಯಿಂದ ಹಣದ ರೂಪದಲ್ಲಿ ಬಂದ ಕಾಣಿಕೆ ರೂ.30,000

LIBRARY



**8.** Mr. Prakash is the owner of following houses in Bangalore & the particulars of which are relating to previous year 2020-21.

| Particulars | House-A Rs. | House-B Rs. | House-C Rs. |
|---|---|---|---|
| 1) Municipal value | 1,20,000 | 1,32,000 | 1,44,000 |
| 2) Fair Rental value | 1,50,000 | 1,60,000 | 1,75,000 |
| 3) Standard Rent | 1,44,000 | 1,50,000 | 1,60,000 |
| 4) Nature of House | Let out for Residence | Let out for Business | SOP |
| 5) Rent received (p.m.) | 15,000 | 18,000 | — |
| 6) Municipal tax paid by owner | 18,000 | 19,800 | 14,400 |
| 7) Cost of repairs | 18,000 | 12,000 | — |
| 8) Interest on loan for construction | 45,000 | 60,000 | 2,25,000 |
| 9) Unrealised rent for the year 2020-21 | 12,000 | 18,000 | — |
| 10) Vacancy period | 2 months | 2 months | — |
| 11) Year of completion | 2017 | 2016 | 2014 |

BMSCW LIBRARY

Compute the taxable income from house property for the A.Y. 2021-22.

ಬೆಂಗಳೂರಿನಲ್ಲಿ ಶ್ರೀ ಪ್ರಕಾಶ್ ಎಂಬುವರು ಈ ಕೆಳಗಿನ ಮನೆಗಳ ಮಾಲಿಕರಾಗಿದ್ದಾರೆ. ಈ ಕೆಳಗೆ ಕೊಟ್ಟಿರುವ ವಿಷಯಗಳು ಆರ್ಥಿಕ ವರ್ಷ 2020-21 ಕ್ಕೆ ಸಂಬಂಧಪಟ್ಟಿರುತ್ತದೆ.

| ವಿಷಯಗಳು | ಮನೆ-A ರೂ. | ಮನೆ-B ರೂ. | ಮನೆ-C ರೂ. |
|---|---|---|---|
| 1) ಪುರಸಭೆ ಮೌಲ್ಯ | 1,20,000 | 1,32,000 | 1,44,000 |
| 2) ನ್ಯಾಯವಾದ ಬಾಡಿಗೆ ಮೌಲ್ಯ | 1,50,000 | 1,60,000 | 1,75,000 |
| 3) ನಿರ್ದಿಷ್ಟಮಾನ ಬಾಡಿಗೆ | 1,44,000 | 1,50,000 | 1,60,000 |
| 4) ಮನೆ ಉಪಯೋಗಿಸಿದ ರೀತಿ | ಬಾಡಿಗೆ ಮನೆ | ಬಾಡಿಗೆ ವ್ಯವಹಾರಕ್ಕೆ | ಸ್ವಂತ ವಾಸಕ್ಕೆ |
| 5) ಬಾಡಿಗೆ ಬಂದಿದ್ದು (ಮಾಸಿಕ) | 15,000 | 18,000 | — |
| 6) ಮಾಲಿಕನು ಕಟ್ಟಿದ ಪುರಸಭೆ ತೆರಿಗೆ | 18,000 | 19,800 | 14,400 |
| 7) ದುರಸ್ತಿ ಖರ್ಚು | 18,000 | 12,000 | — |
| 8) ಮನೆ ಕಟ್ಟಲು ಮಾಡಿದ ಸಾಲದ ಮೇಲಿನ ಬಡ್ಡಿ | 45,000 | 60,000 | 2,25,000 |
| 9) 2020-21 ರ ವಸೂಲಾಗದ ಬಾಡಿಗೆ | 12,000 | 18,000 | — |
| 10) ಖಾಲಿ ಮನೆಯ ಅವಧಿ (ತಿಂಗಳಲ್ಲಿ) | 2 months | 2 months | — |
| 11) ಮನೆಯನ್ನು ಕಟ್ಟಿದ ವರ್ಷ | 2017 | 2016 | 2014 |

ತೆರಿಗೆ ವರ್ಷ 2021-22 ಕ್ಕೆ ಅನ್ವಯವಾಗುವಂತೆ ಇವರ ಮನೆ ಆದಾಯವನ್ನು ಕಂಡುಹಿಡಿಯಿರಿ.

LIBRARY



9. Smt. Keerthi an employee of R.K.Ltd. Delhi receives the following incomes during the year ending 31-03-2021.

a) Basic salary upto 31-08-2020 Rs.6,000 p.m. and there after Rs.6,500 p.m.

b) Leave Travel Concession Rs.4,500 (entire amount spent)

c) Dearness allowance Rs.4,500 p.m. (2/3rd enters into retirement benefits)

d) Children education allowances Rs.250 p.m. for one child.

e) Reimpursement of medical expenses Rs.30,000 (private hospital)

f) Facility of wathchman & cook is provided by the company. Each of whom is paid a salary of Rs.700 p.m.

g) Interest free loan for purchasing home appliences for 60,000 is provided by the co. on 1-4-2020 (SBI lending rate for similar loan on 1-4-2020 is 10% p.a.)

h) Smt. Keerthi has been provided with rent free flat in Delhi (rent paid by the company Rs.40,000 per annum)

i) Smt. Keerthi paid professional tax Rs.200/- per month. Compute taxable income from salary of Smt. Keerthi for the A.Y. 2021-22.

BMSCW LIBRARY

ಶ್ರೀಮತಿ ಕೀರ್ತಿ R.K.Ltd. ದೆಹಲಿಯ ಉದ್ಯೋಗಿ ಕೆಳಕಂಡ ಆದಾಯವನ್ನು ದಿನಾಂಕ 31-03-2021 ಕ್ಕೆ ಕೊನೆಗೊಂಡ ವರ್ಷದಲ್ಲಿ ಸ್ವೀಕರಿಸಿದ್ದಾರೆ.

a) ಮೂಲ ವೇತನ 31-08-2020 ರ ವರೆಗೆ ಮಾಸಿಕ ರೂ.6,000 ಮತ್ತು ತದನಂತರ ಮಾಸಿಕ ರೂ.6,500

b) ರಜೆ ಪ್ರಯಾಣ ರಿಯಾಯಿತಿ ರೂ.4,500 (ಸಂಪೂರ್ಣ ಮೊತ್ತ ಖರ್ಚಾಗಿದೆ)

c) ತುಟ್ಟಿ ಭತ್ಯೆ ಮಾಸಿಕ ರೂ.4,500 (2/3 ರಷ್ಟು ನಿವೃತ್ತಿ ಸೌಲಭ್ಯಗಳಿಗೆ ಸೇರ್ಪಡೆಯಾಗಿರುತ್ತದೆ).

d) ಮಕ್ಕಳ ವಿದ್ಯಾಭ್ಯಾಸ ಭತ್ಯೆ ಮಾಸಿಕ ರೂ.250 ರಂತೆ ಒಂದು ಮಗುವಿಗೆ.

e) ಆರೋಗ್ಯ ಸಂಬಂಧಿ ಖರ್ಚಿಗಾಗಿ ಮರುಪಾವತಿಸಿಕೊಂಡ ಮೊತ್ತ ರೂ.30,000 (ಖಾಸಗಿ ಆಸ್ಪತ್ರೆ)

f) ಕಂಪನಿಯಿಂದ ಒಬ್ಬ ವಾಚ್‌ಮ್ಯಾನ್ ಹಾಗೂ ಒಬ್ಬ ಅಡುಗೆಯವನ ಸೌಲಭ್ಯವನ್ನು ನೀಡಿದ್ದು ಪ್ರತಿಯೊಬ್ಬನಿಗೂ ಮಾಸಿಕ ರೂ.700 ವೇತನ ಪಾವತಿಸಲಾಗಿದೆ.

g) ದಿನಾಂಕ 1-4-2020 ರಂದು ಕಂಪನಿಯಿಂದ ಗೃಹೋಪಕರಣಗಳ ಖರೀದಿಗಾಗಿ ಬಡ್ಡಿ ರಹಿತ ಸಾಲ ರೂ.60,000 ಗಳನ್ನು ಒದಗಿಸಲಾಗಿದೆ. (ಇದೇ ರೀತಿಯ ಸಾಲಗಳಿಗೆ ದಿನಾಂಕ 1-4-2020 ರಂದು SBI ಬಡ್ಡಿದರ ವಾರ್ಷಿಕ 10% )

h) ಶ್ರೀಮತಿ ಕೀರ್ತಿ ರವರಿಗೆ ದೆಹಲಿಯಲ್ಲಿ ಬಾಡಿಗೆ ರಹಿತ ಮನೆಯನ್ನು ಒದಗಿಸಲಾಗಿದೆ. (ಸಂಸ್ಥೆಯು ಪಾವತಿಸಿದ ವಾರ್ಷಿಕ ಬಾಡಿಗೆ ರೂ.40,000)

i) ಶ್ರೀಮತಿ ಕೀರ್ತಿರವರು ಮಾಸಿಕ ರೂ. 200/- ವೃತ್ತಿ ತೆರಿಗೆಯನ್ನು ಪಾವತಿಸಿದ್ದಾರೆ.

ಕರ ವರ್ಷ 2021-22 ಕ್ಕೆ ಶ್ರೀಮತಿ ಕೀರ್ತಿರವರ ವೇತನ ಆದಾಯವನ್ನು ಕಂಡುಹಿಡಿಯಿರಿ.

LIBRARY



**10.** Mr. Anand is the owner of three houses in Mysore, the particulars of which are given below:

| Particulars | House-A Rs. | House-B Rs. | House-C Rs. |
|---|---|---|---|
| 1) Municipal value | 30,000 | 40,000 | 20,000 |
| 2) Fair Rental | 36,000 | 30,000 | 24,000 |
| 3) Let out (per month) | 4,000 | 3,000 | 5,000 |
| 4) Construction completed | 1-4-2017 | 1-6-2017 | 31-3-2016 |
| 5) Repairs | — | 5,000 | 4,000 |
| 6) Municipal tax paid by owner | 3,000 | — | — |
| 7) Municipal tax paid by tenant | — | — | 2,000 |
| 8) Municipal tax due | — | 4,000 | — |
| 9) Vacancy period | — | — | 2 months |

Anand took a loan of Rs.3,00,000 @ 8.5% p.a. for construction of House B ; date of borrowing loan is 01-07-2014.

Compute taxable income from house property for the A.Y. 2021-22.

BMSCW LIBRARY

ಶ್ರೀ ಆನಂದ ರವರು ಮೈಸೂರಿನಲ್ಲಿ ಮೂರು ಮನೆಗಳನ್ನು ಹೊಂದಿದ್ದಾರೆ. ಅವುಗಳ ವಿವರಗಳು ಈ ಕೆಳಕಂಡಂತೆ ಇವೆ.

| ವಿವರಗಳು | ಮನೆ-A ರೂ. | ಮನೆ-B ರೂ. | ಮನೆ-C ರೂ. |
|---|---|---|---|
| 1) ಪುರಸಭೆ ಮೌಲ್ಯ | 30,000 | 40,000 | 20,000 |
| 2) ಮನೆಯ ನ್ಯಾಯಯುತ ಬಾಡಿಗೆ | 36,000 | 30,000 | 24,000 |
| 3) ಬಾಡಿಗೆ (ಪ್ರತಿ ತಿಂಗಳು) | 4,000 | 3,000 | 5,000 |
| 4) ನಿರ್ಮಾಣ ಪೂರ್ಣಗೊಂಡ ದಿನಾಂಕ | 1-4-2017 | 1-6-2017 | 31-3-2016 |
| 5) ದುರಸ್ತಿ | — | 5,000 | 4,000 |
| 6) ಮನೆ ಮಾಲೀಕರು ಕಟ್ಟಿದ ಪುರಸಭೆ ತೆರಿಗೆ | 3,000 | — | — |
| 7) ಮನೆಯ ಬಾಡಿಗೆದಾರ ಕಟ್ಟಿದ ಪುರಸಭೆ ತೆರಿಗೆ | — | — | 2,000 |
| 8) ಪುರಸಭೆ ತೆರಿಗೆ ಬಾಕಿ | — | 4,000 | — |
| 9) ಮನೆ ಖಾಲಿ ಅವಧಿ | — | — | 2 ತಿಂಗಳು |

ಶ್ರೀ ಆನಂದ್ ಬ್ಯಾಂಕಿನಿಂದ ಮನೆ 'ಬಿ' ಕಟ್ಟಲು ಶೇಕಡಾ 8.5 ರಂತೆ ಒಟ್ಟು ರೂ.3,00,000 ಗಳ ಮನೆ ಸಾಲವನ್ನು ತೆಗೆದು ಕೊಂಡಿರುತ್ತಾರೆ. (ಸಾಲ ಪಡೆದದ್ದು 01-07-2014) ಕರ ವರ್ಷ 2021-22 ಅವನ ಮನೆ ಆಸ್ತಿ ಆದಾಯವನ್ನು ಕಂಡುಹಿಡಿಯಿರಿ.

LIBRARY



11. Mr. Praveen is an employee of XYZ Ltd. at Bangalore. He furnishes the following information for the A.Y. 2021-22.

a) Basic Salary Rs.8,000 p.m.

b) Dearness Allownces Rs.6,000 p.m. (Rs.1,000 enters into all retirement benefits)

c) Education allowances for 2 children at Rs.350 p.m. per child.

d) House rent allowances Rs.1600 p.m. but actual rent paid by him is Rs.3,000 p.m.

e) He and Company contribute 14% of salary towards RPF.

f) Interest on RPF was 15% p.a. Rs.15,000

g) Company paid Rs.6,000 towards income tax and Rs.3,000 towards professional tax of Mr. Praveen.

h) He received bonus equals to 2 months salary.

i) Children hostel allowances for 2 children @ Rs.400 per child, per month.

Compute the taxable salary of Mr. Praveen for the A.Y. 2021-22.

BMSCW LIBRARY

ಶ್ರೀಯುತ ಪ್ರವೀಣ್ ರವರು ಬೆಂಗಳೂರಿನ XYZ ಕಂಪನಿಯ ಉದ್ಯೋಗಿಯಾಗಿದ್ದಾರೆ. 2021-22 ನೇ ಕರವರ್ಷಕ್ಕೆ ಅವರು ಈ ಕೆಳಕಂಡ ಮಾಹಿತಿಯನ್ನು ಒದಗಿಸಿದ್ದಾರೆ.

a) ಮೂಲ ವೇತನ ರೂ.8,000 ತಿಂಗಳಿಗೆ.

b) ತುಟ್ಟಿ ಭತ್ಯೆ ತಿಂಗಳಿಗೆ ರೂ.6,000 ಗಳು (ರೂ.1,000 ನಿವೃತ್ತಿ ವೇತನ ಲೆಕ್ಕಾಚಾರಕ್ಕೆ ಪರಿಗಣಿಸುವುದು)

c) ಮಕ್ಕಳ ವಿದ್ಯಾಭ್ಯಾಸ ಭತ್ಯೆ ಮಾಸಿಕ ಇಬ್ಬರು ಮಕ್ಕಳಿಗೆ ತಲಾ ರೂ.350 ಗಳು

d) ಮನೆ ಬಾಡಿಗೆ ಭತ್ಯೆ ತಿಂಗಳಿಗೆ ರೂ.1600 ಗಳು. ಆದರೆ ಅವರು ಪಾವತಿಸುವ ನೈಜವಾದ ಬಾಡಿಗೆ ತಿಂಗಳಿಗೆ ರೂ.3,000 ಗಳು.

e) ವೇತನದ 14% ರಷ್ಟು ಇವರು ಹಾಗೂ ಇವರ ಕಂಪನಿಯು RPF ಗೆ ವಂತಿಗೆಯನ್ನು ನೀಡಿದ್ದಾರೆ.

f) RPF ನ ಮೇಲೆ ವಾರ್ಷಿಕ ಬಡ್ಡಿ 15% ಆಗಿರುತ್ತದೆ. ರೂ.15,000

g) ಕಂಪನಿಯು ಶ್ರೀಯುತ ಪ್ರವೀಣ್‌ರ ಆದಾಯ ತೆರಿಗೆ ರೂ.6,000 ಗಳು ಹಾಗೂ ವೃತ್ತಿ ತೆರಿಗೆ ರೂ.3,000 ಗಳನ್ನು ಪಾವತಿಸಿದೆ.

h) ಎರಡು ತಿಂಗಳ ಸಂಬಳವನ್ನು ಬೋನಸ್ ಆಗಿ ನೀಡಲಾಗಿದೆ.

i) ಇಬ್ಬರು ಮಕ್ಕಳ ವಿದ್ಯಾರ್ಥಿನಿಲಯದ ಮಾಸಿಕ ಭತ್ಯೆ ತಲಾ ರೂ.400 ಗಳಾಗಿರುತ್ತದೆ.

ತೆರಿಗೆ ವರ್ಷ 2021-22 ಕ್ಕೆ ಅನ್ವಯವಾಗುವಂತೆ ಇವರ ತೆರಿಗೆಗೆ ಒಳಪಡುವ ವೇತನ ಆದಾಯವನ್ನು ಕಂಡುಹಿಡಿಯಿರಿ.

---